**ಬುತ್ತಿ ಚಿಗುರು**

## ಆ ಕಾಲದ ಲಕ್ಷ್ಮಿ!

ಕೇಶವನ ತಪಸ್ಸಿಗೆ ಮೆಚ್ಚಿ ದೇವಿ ಲಕ್ಷ್ಮಿ ಪ್ರತ್ಯಕ್ಷವಾಗಿ 'ಏನು ಬೇಕು ಕೇಳು' ಎಂದಳು. 'ನನಗೆ ಐದು ಗೋಣಿಚೀಲದಷ್ಟು ಹಣ ಬೇಕು' ಎಂದ ಕೇಶವ. ತಕ್ಷಣವೇ ಆತನ ಮುಂದೆ ಹಣ ತುಂಬಿದ ಐದು ಗೋಣಿಚೀಲಗಳು ಕಾಣಿಸಿಕೊಂಡವು .

ಕೇಶವ ಸಂತೋಷದಿಂದ ಮನೆಗೆ ತೆಗೆದುಕೊಂಡು ಹೋಗಿ, ಆ ಗೋಣಿಚೀಲಗಳನ್ನು ತೆರೆದು ನೋಡಿದಾಗ ಎಲ್ಲವೂ 1000 ಹಾಗೂ 2000 ಚಲಾವಣೆಯಲ್ಲಿ ಇಲ್ಲದ ನೋಟುಗಳು. ಕೇಶವನಿಗೆ ನಿರಾಶೆಯಾಗಿ ಮತ್ತೆ ಲಕ್ಷ್ಮಿಯನ್ನು ಪ್ರಾರ್ಥಿಸಿದ.

ಆಕೆ ಪ್ರತ್ಯಕ್ಷಳಾಗಿ 'ಮತ್ತೇನು ನಿನ್ನ ಬೇಡಿಕೆ' ಎಂದಾಗ, 'ಮಾತೆ ನೀನು ದಯಪಾಲಿಸಿರುವ ನೋಟುಗಳು ಚಲಾವಣೆಯಲ್ಲಿ ಇಲ್ಲದ ಹಳೆಯ ನೋಟುಗಳು' ಎಂದನು.

'ಹೌದು ಅದು ನನಗೂ ಗೊತ್ತು. ಆದರೆ, ನಿನಗೆ ಒಂದು ವಿಷಯ ಗೊತ್ತಿಲ್ಲ. ನಾನು ಆ ನೋಟುಗಳು ಇದ್ದ ಕಾಲದಲ್ಲಿದ್ದ ಲಕ್ಷ್ಮಿ' ಎಂದು ಹೇಳಿ ಮಾಯವಾದಳು.



**ಶಂಕರೇಗೌಡ ತುಂಬಕೆರೆ**

---

## ಮೆಹಂದಿ ಚಟ್ನಿ!

'ಇವತ್ತು ನೀನು ಮಾಡಿದ ಚಟ್ನಿ ರುಚಿಯೇ ಇಲ್ಲ. ಆದರೆ, ನೀನು ಏನಂತಿಯೋ ಅಂತ ಕಷ್ಟಪಟ್ಟು ತಿಂದೆ' ಎಂದ ಗಂಡ. 'ರೀ.. ಸತ್ಯ ಹೇಳಿ, ತಮಾಷೆ ಮಾಡ್ತಿಲ್ಲ ತಾನೇ' ಎಂದಳು ಹೆಂಡತಿ. 'ನಿಜವಾಗ್ಲೂ ಚಟ್ನಿ ರುಚಿ ಇರಲಿಲ್ಲ ಕಣೇ' ಎಂದು ಪುನರುಚ್ಚರಿಸಿದ ಗಂಡ. 'ಅಲ್ಲ ರೀ, ನಾನಿವತ್ತು ಚಟ್ನಿಯನ್ನೇ ಮಾಡಿಲ್ಲ. ಮತ್ತೆ ಅದು ಹೇಗೆ ತಿಂದ್ರಿ' ಮರುಪ್ರಶ್ನಿಸಿದಳು ಹೆಂಡತಿ. 'ಅರೆ, ಮಿಕ್ಸಿ ಪಕ್ಕ ಚಿಕ್ಕ ಪಾತ್ರೆಯಲ್ಲಿ ನೀನೇ ಇಟ್ಟಿದ್ದೆಯಲ್ಲ.. ಹಸಿರು ಚಟ್ನಿ ಅದನ್ನೇ ನಾನು ತಿಂದಿದ್ದು' ಎಂದ ಗಂಡ. 'ಅಯ್ಯೋ ರಾಮ!. ಅದು ಚಟ್ನಿ ಅಲ್ಲ ರೀ... ನಾನು ಕೂದಲಿಗೆ ಹಾಕಲು ಕಲಸಿಟ್ಟ ಮದರಂಗಿ ಪುಡಿಯ ಪೇಸ್ಟ್ ಕಣ್ರೇ' ಎಂದು ಹೆಂಡತಿ ಹೇಳಿದಾಗ, ಗಂಡ ಸುಸ್ತಾದ!



**ವಾಣಿಶ್ರೀ ಕೊಂಬಾಡಿ**